3.50 ಪಿ.ಎಂ.

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ಬೆಂಕಿ ಬಿದ್ದಿರುವುದು ನಿಜ. ಅವರು 10 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ನಿಮ್ಮಲ್ಲಿರುವ ಮಾಹಿತಿಗಳನ್ನು ಕಳುಹಿಸಿಕೊಡಿ. ನಾನು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ. ನಾವಿಬ್ಬರೂ ಹೋಗೋಣ. ಅಲ್ಲಿ ಬೆಂಕಿ ಬಿದ್ದಿದ್ದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಪ್ರದೇಶದಲ್ಲಿ ಯಾವುದೇ ವನ್ಯ ಜೀವಿಗಳು ನಾಶವಾಗಿಲ್ಲ ಮತ್ತು ಬೆಲೆ ಬಾಳುವಂಥ ಮರಗಳೂ ನಾಶವಾಗಿಲ್ಲ. ಹುಲ್ಲು ಸುಟ್ಟು ಹೋಗಿದೆ. ಅದನ್ನು ಆರಿಸಲು ಪ್ರಯತ್ನ ಮಾಡಿದ್ದಾರೆ. ಈ ಬೆಳಿಗ್ಗೆ ನಾನು ಅಲ್ಲಿಯ ಕನ್ಸರ್ವೇಟರ್ ಹತ್ತಿರ ಮಾತನಾಡಿದ್ದೇನೆ. ಅವರು ವರದಿ ಕಳುಹಿಸಿರುವ ಪ್ರಕಾರ 50 ಸಾವಿರ ರೂಪಾಯಿ ನಷ್ಟವಾಗಿದೆ. ನೀವು ಒಂದು ಸಲ 10 ಕೋಟಿ ರೂಪಾಯಿ ಎಂದು ಹೇಳುತ್ತಿದ್ದೀರಿ, ಮತ್ತೊಂದು ಸಲ 1 ಕೋಟಿ 67 ಲಕ್ಷ ರೂಪಾಯಿ ಎಂದು ಹೇಳತ್ತಿದ್ದೀರಿ. ಅದಕ್ಕೋಸ್ಕರವಾಗಿ ಈ ಅಧಿವೇಶನ ಮುಗಿದ ಮೇಲೆ ನಾನು ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ಪ್ರಾಣಿಗಳು ಸತ್ತಿವೆ. ತಾವು ಪ್ರಾಮಾಣಿಕವಾಗಿ ತನಿಖೆ ಮಾಡಿ. ನಾಗರಹೊಳೆಯಲ್ಲಿ ಪ್ರತಿವರ್ಷ ಸುಟ್ಟು ಹೋಗುತ್ತಿದೆ. ನಾನು ಸುಮಾರು 3-4 ಸಲ ಸುಟ್ಟಿರುವ ಸ್ಥಳಗಳಿಗೆ ಮೈಸೂರಿನ ಪತ್ರಕರ್ತರನ್ನು ಕರೆದುಕೊಂಡು ಹೋಗಿ ನೋಡಿದ್ದೇನೆ. ಅದೇ ಪ್ರದೇಶದಲ್ಲಿ ಆನೆಗಳು ಬೆಂದು ಹೋಗಿರತಕ್ಕಂಥಾದ್ದೂ ಇದೆ. ಇದನ್ನು ತಾವು ಲಘುವಾಗಿ ತೆಗೆದುಕೊಳ್ಳುವುದಿಲ್ಲ. ಅಧಿಕಾರಿಗಳು ಬರೆದುಕೊಟ್ಟಂಥ ಹೇಳಿಕೆಯನ್ನು ಕೊಡುವುದಿಲ್ಲ. ನಿಜವಾಗಿಯೂ ಇಲ್ಲಿ ಅನೇಕ ವನ್ಯ ಮೃಗಗಳು ನಾಶವಾಗಿದೆ, ಪಕ್ಷಿಗಳು ನಾಶವಾಗಿವೆ, ಜಿಂಕೆಗಳು ನಾಶವಾಗಿದೆ. ನೀವು ತನಿಖೆ ಮಾಡಿಸಿದರೆ ಇವೆಲ್ಲವು ಸ್ಪಷ್ಟವಾಗಿ ಹೊರಗೆ ಬರುತ್ತದೆ. ಆದ್ದರಿಂದ ತನಿಖೆ ಮಾಡಿಸಿ

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಪೇಪರ್ ನೋಡಿ ನಿಮಗೇ ತಿಳಿಯುತ್ತದೆ.

ಶ್ರೀ ಡಿ. ಮಂಜುನಾಥ : ನಾನು ನಿಮಗೆ ಉತ್ತರ ಹೇಳುತ್ತೇನೆ ಕೇಳಿ. ನಾನು ನಿಮ್ಮನ್ನೂ ಜೊತೆಗೆ ಕರೆದುಕೊಂಡು ಹೋಗುತ್ತೇನೆ, ಎಷ್ಟು ಸುಟ್ಟು ಹೋಗಿದೆ, ಎಷ್ಟು ಲಾಸ್ ಆಗಿದೆ ಎನ್ನುವುದನ್ನು ನೋಡೋಣ. ಅದು ನಿಜವಾಗಿದ್ದರೆ ಖಂಡಿತವಾಗಿಯೂ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಎ) ಏತನೀರಾವರಿ ಯೋಜನೆಗಳಿಗೆ ನೀರನ್ನೆತ್ತಲು ಸರ್ಕಾರದಿಂದ ಅನುಮತಿ ಪಡೆದುಕೊಳ್ಳುವುದರ ಸುತ್ತೋಲೆ ಕುರಿತು.

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಉಪಾಧ್ಯಕ್ಷರೇ, ಸರ್ಕಾರದ ಒಂದು ಭಾರೀ ವಿಪರ್ಯಾಸದ ಸುತ್ತೋಲೆಯ ಬಗ್ಗೆ ಹೇಳುತ್ತೇನೆ. ಏತ ನೀರಾವರಿ ಯೋಜನೆಗಳಿಗೆ ನೀರನ್ನೆತ್ತಲು ನಾವು ಸರ್ಕಾರದಿಂದ ಅನುಮತಿ ಪಡೆದುಕೊಳ್ಳಬೇಕು. ಆ ಸುತ್ತೋಲೆಯಲ್ಲಿ ಕೊಟ್ಟಿರುವುದನ್ನು ನೋಡಿದರೆ ಇದು ನಿಜವಾಗಿ ರೈತರ ವಿರೋಧಿ ಸರ್ಕಾರ ಎಂದು ಹೇಳಬೇಕಾಗುತ್ತದೆ. ಏತ ನೀರಾವರಿ ವ್ಯವಸ್ಥೆಯ ಮೂಲಕ ನಾವು ಬೇಸಿಗೆಯ ಕಾಲದಲ್ಲಿ ಅಂದರೆ ಜನವರಿಯಿಂದ ಜೂನ್‌ವರೆಗೆ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿರತಕ್ಕಂಥ ವಿಚಾರ ಆ ಸುತ್ತೋಲೆ ಯಲ್ಲಿದೆ. ನೀರಾವರಿ ಇಲಾಖೆಯ ಅಧಿಕಾರಿಗಳು ಈ ರೀತಿಯ ಪರವಾನಗಿಯನ್ನು ನೀಡುವಾಗ ಬೇಸಿಗೆ ತಿಂಗಳನ್ನು

ಹೊರತುಪಡಿಸಿ ಫೆಬವರಿಯಿಂದ ಜೂನ್‌ವರೆಗೆ ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು ಹಾಗೂ ಇದರ ಉಲ್ಲಂಘನೆಯಾಗದಂತೆ ನಿಗಾ ವಹಿಸತಕ್ಕದ್ದು ಎಂದು ಇದೆ. ಮತ್ತೆ ಮುಂದುವರೆದು ಹೇಳುತ್ತಾರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪರವಾನಗಿ ಪಡೆದಿರುವ ಏತ ನೀರಾವರಿ ಯೋಜನೆಗಳಿಗೆ ವಿದ್ಯುತ್ ಸರಬರಾಜಿಗಾಗಿ ಮುಂಜೂರಾತಿ ನೀಡುವಾಗ ಬೇಸಿಗೆ ತಿಂಗಳಲ್ಲಿ ವಿದ್ಯುತ್ ಸರಬರಾಜು ಮಾಡುವುದಿಲ್ಲವೆಂದು ನಮೂದಿಸಿ ಮುಂಜೂರಾತಿ ನೀಡಬೇಕು ಎಂದು ಇದೆ. ಎಂಥ ವಿಪರ್ಯಾಸ. ಇದರಿಂದ ಏನಾಗಬಹುದು. ಏತ ನೀರಾವರಿ ಇರುವುದು ಜನವರಿಯಿಂದ ಜೂನ್‌ವರೆಗೆ ಅಂದರೆ ಮಳೆಗಾಲ ಬರುವವರೆಗೆ ನೀರನ್ನು ಲಿಫ್ಟ್ ಮಾಡಬೇಕು. ಆ ಸಂದರ್ಭದಲ್ಲಿ ನೀರನ್ನು ತೆಗೆದುಕೊಡದು ಎಂದು ಈ ಸುತ್ತೋಲೆಯಲ್ಲಿದೆ. ನಿಮ್ಮ ಕರೆಂಟನ್ನು ಈಗ ತೆಗೆಯುತ್ತೇನೆ, ಆಗ ತೆಗೆಯುತ್ತೇನೆ ಎಂದು ಇಲಾಖೆಯ ಅಧಿಕಾರಿಗಳು ದುಡ್ಡು ವಸೂಲು ಮಾಡಲು ಮಾಡಿರುವುದೇ ಇದನ್ನು ? ಅಂಥ ರೈತ ವಿರೋಧಿಯಾದಂಥ ಸುತ್ತೋಲೆಯನ್ನು 17-1-97ಕ್ಕೆ ಕಳಿಹಿಸಿದ್ದೀರಿ. ಈಗ ನಾವು ಮೈನರ್ ಇರಿಗೇಷನ್ನಿನ ಯಾವುದೇ ಕಛೇರಿಗೆ ಯಾವುದೇ ಪರವಾನಗಿಗೆ ಹೋದರೂ ನೀವು ಫೆಬ್ರವರಿಯಿಂದ ಜೂನ್‌ವೆರೆಗೆ ನೀರತ್ತಕೂಡದು, ಫೆಬ್ರವರಿಯಿಂದ ಜೂನ್‌ವರೆಗೆ ಎಲೆಕ್ಟ್ರಿಸಿಟಿಯನ್ನು ಕಟ್ ಮಾಡುತ್ತೇವೆ ಎಂದು ಹೇಳುತ್ತಾರೆ. ಇದು ಲೈಸ್‌ನ್ಸ್ ಕೊಡುವಂಥಾದ್ದೇ? ತಕ್ಷಣ ಇದನ್ನು ವಿತ್‌ಡ್ರಾ ಮಾಡಬೇಕು. ರೈತರ ಪರವಾಗಿದೆ ಎಂದು ಹೇಳುವಂಥ ಸರ್ಕಾರ, ಈ ರೀತಿ ಲೈಸ್‌ನ್ಸ್ ಕೊಡುವ ವ್ಯವಸ್ಥೆಯನ್ನು ಅಥವಾ ಏತ ನೀರಾವರಿಗೆ ಸಂಬಂಧಿಸಿದ ಈ ಸುತ್ತೋಲೆಯನ್ನು ತಕ್ಷಣ ವಿತ್‌ಡ್ರಾ ಮಾಡಬೇಕು. ಇಲ್ಲದಿದ್ದರೆ ಏನು ಪ್ರಯೋಜನ? ಕರ್ನಾಟಕ ರಾಜ್ಯದ ರೈತ ಏತ ನೀರಾವರಿಗೆ ಪರವಾನಗಿಯನ್ನು ಪಡೆದು ಕೊಳ್ಳುವುದೇ ಜನವರಿಯಿಂದ ಜೂನ್‌ವರೆಗೆ ನೀರೆತ್ತಲು. ಮಳೆ ಬೀಳದೇ ಇರುವ ಈ ತಿಂಗಳುಗಳಲ್ಲಿ ನೀರನ್ನು ಎತ್ತಿ ತೋಟಕ್ಕೆ ಮತ್ತು ಕೃಷಿಗೆ ಉಪಯೋಗ ಮಾಡಿಕೊಳ್ಳಲು. ನಾನು ಸರ್ಕಾರವನ್ನು ಆಗ್ರಹ ಮಾಡುತ್ತೇನೆ, ತಕ್ಷಣ ಈ ಸುತ್ತೋಲೆಯನ್ನು ವಿತ್‌ಡ್ರಾ ಮಾಡಬೇಕು. ಏತ ನೀರಾವರಿ ವ್ಯವಸ್ಥೆಯಲ್ಲಿ ಹಿಂದೆ ನಿಗದಿಪಡಿಸಿದ ರೀತಿಯಲ್ಲಿ ಜನವರಿಯಿಂದ ಜೂನ್‌ವರೆಗೆ ನಿರಾತಂಕವಾಗಿ ನೀರನ್ನೆತ್ತಲು ಅವಕಾಶ ಕೊಡಬೇಕು ಮತ್ತು ಆ ಸಂದರ್ಭದಲ್ಲಿ ವಿದ್ಯುಚ್ಛಕ್ತಿಯನ್ನೂ ಸಹ ಪೂರೈಕೆ ಮಾಡಲು ಪರವಾನಗಿಯನ್ನು ಕೊಡಬೇಕು ಎಂದು ಹೆ ಳಿ, ಈ ಸುತ್ತೋಲೆಯನ್ನು ವಿತ್‌ಡ್ರಾ ಮಾಡಬೇಕು ಎಂದು ನಾನು ಸರ್ಕಾರವನ್ನು ಆಗ್ರಹ ಮ ಾಡುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಭೂ ಜಲ ಅಭಿವೃದ್ಧಿ ಸಚಿವರು) : ಆ ಸುತ್ತೋಲೆಯನ್ನು ಕೊಟ್ಟಿರುವವರು ಯಾರು? ಅದು ಯಾರಿಂದ ಬಂದಿದೆ.

ಶ್ರೀ ಡಿ.ವಿ. ಸದಾನಂದ ಗೌಡ : ನಾನು ಅದರ ಸಂಖ್ಯೆಯನ್ನು ಓದುತ್ತೇನೆ. ಆದೇಶದ ಸಂಖ್ಯೆ: ನೀಇ 3 ಎಂಬಿಐ 93, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು, ದಿನಾಂಕ 17-1-97. ಇದನ್ನು ಎನ್.ಎಂ.ಪಂಚಗಟ್ಟಿ, ಕಾರ್ಯದರ್ಶಿ, ನೀರಾವರಿ ಇಲಾಖೆ- ಇವರು ಕೊಟ್ಟಿದ್ದಾರೆ. ಈ ಸುತ್ತೋಲೆಯನ್ನು ಎಲ್ಲ ಮೈನರ್ ಇರಿಗೇಷನ್ನಿನ ಕಛೇರಿಗೆ ಕಳುಹಿಸಿಕೊಟ್ಟಿದ್ದೀರಿ.

ಶ್ರೀ ತಿಪ್ಪೇಸ್ವಾಮಿ: ಆ ಆರ್ಡರನ್ನು ನನಗೆ ಕಳುಹಿಸಿ ಕೊಡಲಿ. ಏನಾಗಿದೆ ಎನ್ನುವುದನ್ನು ನೋಡಿ, ಅದರ ಬಗ್ಗೆ ನಾನು ವ್ಯವಸ್ಥೆ ಮಾಡುತ್ತೇನೆ. ಅದನ್ನು ಯಾರು ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಅದನ್ನು ತಾವು ಕಳುಹಿಸಿಕೊಡಿ.

ಶ್ರೀ ಡಿ.ವಿ. ಸದಾನಂದಗೌಡ : ಕಳುಹಿಸಿ ಕೊಡುತ್ತೇನೆ.

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಜರ್ಮನ್ ಮಹಿಳೆಗೆ ಫಾರೆಸ್ಟ್ ಅಫಿಷಿಯಲ್ಸ್ ಹೊಡೆದಿದ್ದಾರೆ ಎಂದು ಶ್ರೀರಾಮ ರೆಡ್ಡಿಯವರಿ ಪ್ರಶ್ನೆ ಕೇಳಿದ್ದಾರೆ. ಅದು ನಮ್ಮಲ್ಲಿ ಆಗಿಲ್ಲ . ಅದು ತಮಿಳುನಾಡಿನಲ್ಲಿ ಆಗಿರುವುದು. ಅದಕ್ಕೂ ನಮಗೂ ಏನೂ ಸಂಬಂಧವಿಲ್ಲ.

ಐ) ಸರ್ಕಾರೀ ಪ್ರಥಮ ದರ್ಜೆ ಕಾಲೇಜುಗಳು ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸುವುದು.

ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಉಪಾಧ್ಯಕ್ಷರೇ, ಸರ್ಕಾರೀ ಪ್ರಥಮ ದರ್ಜೆ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರ ಸಕ್ರಮೀಕರಣದ ಬಗ್ಗೆ ಪ್ರಸ್ತಾಪ ಮಾಡಲು ನಾನು ಇಚ್ಛಿಪಡುತ್ತಿದ್ದೇನೆ. 1994-95ರಲ್ಲಿ ಜೆ.ಪಿ. ಶರ್ಮಾರವರ ಅಧ್ಯಕ್ಷತೆಯ ಸಮಿತಿಯ ವರದಿಯಂತೆ ,ಎರಡು ವರ್ಷಕ್ಕಿಂತ ಹೆಚ್ಚಿಗೆ ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡಿರತಕ್ಕಂಥವರನ್ನು ಖಾಯಂ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಸರ್ಕಾರ ಕೊಡುವ ಮೂಲಕ, ಅವರ ಪೂರ್ಣ ಪಟ್ಟಿಯನ್ನು ತರಿಸಿ ಒಂದು ನಿಯಾಮಾವಳಿಯನ್ನು ಮಾಡುತ್ತೇವೆ ಎನ್ನುವ ಒಂದು ಕಾರ್ಯವನ್ನು ಪ್ರಾರಂಭ ಮಾಡಿತು. ಈಗಾಗಲೇ ಗೋವಿಂದೇಗೌಡರು ಹೇಳಿದ ಹಾಗೆ ಕೆ.ಎ.ಟಿ.ಗೆ ಹೋಗಿ, ಅದನ್ನು ಮಾಡತಕ್ಕಂಥಾದ್ದು ಸರಿಯಲ್ಲ ಎಂದು ಉಚ್ಛ ನ್ಯಾಯಾಲಯದಿಂದ ಬಂದಿದೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಈಗ ಅವರ ಪರಿಸ್ಥಿತಿ ಏನಾಗಿದೆ ಎನ್ನುವುದರ ಬಗ್ಗೆ ಜವಾಬ್ದಾರಿ ಸ್ಥಾನದಲ್ಲಿರುವ ಸರ್ಕಾರ ಮತ್ತು ನಾವುಗಳು ಯೋಚನೆ ಮಾಡಬೇಕು. 1994-95ರಲ್ಲಿ ಶರ್ಮಾರವರ ಅಧ್ಯಕ್ಷತೆಯ ಸಮಿತಿ ವರದಿ ನೀಡಿದಂಥ ಸಂದರ್ಭದಲ್ಲಿ ಅವರು ಆಗಲೇ ಎರಡು ವರ್ಷಕ್ಕೂ ಮೀರಿ ಅಂದರೆ ಸುಮಾರು 7-8-10 ವರ್ಷಗಳ ಕಾಲ ಅರೆಕಾಲಿಕ ಉಪನ್ಯಾಸಕರಾಗಿ ಸರ್ಕಾರೀ ಕಾಲೇಜುಗಳಲ್ಲಿ ಕೆಲಸ ಮಾಡಿದ್ದಾರೆ. ಅವತ್ತಿನ ದಿವಸ ಇವರನ್ನು ಸಕ್ರಮ ಮಾಡೇ ಮಾಡುತ್ತೇವೆ ಎನ್ನುವ ವಿಶ್ವಾಸವನ್ನು ಅವರಲ್ಲಿ ಮೂಡಿಸುವ ಮೂಲಕ ಇವರು ಬೇರೆ ಯಾವುದೇ ಕೆಲಸಕ್ಕೆ ಹೋಗುವ ವ್ಯವಸ್ಥೆಯಾಗಲಿಲ್ಲ. ಏಕೆಂದರೆ, ಆಗ ಒಂದು ನಿಬಂಧನೆ ಇತ್ತು. ಅದೇನೆಂದರೆ, ಯಾರಾದರೂ ಬೇರೆ ಕೆಲಸಕ್ಕೆ ಸೇರಿದರೆ ಅವರನ್ನು ಉಪನ್ಯಾಸಕರ ಹುದ್ದೆಗೆ ಸಕ್ರಮ ಮಾಡುವುದಿಲ್ಲ ಎಂಬ ನಿಬಂಧನೆ ಇತ್ತು ಆದರಿಂದಾಗಿ, ಅವರ್ಯಾರು ಬೇರೆ ಕೆಲಸಗಳಿಗೆ ಹೋಗಲಿಲ್ಲ. ಈಗ ನಾವು 1998ರಲ್ಲಿದ್ದೇವೆ. ಈಗ ಅವರಿಗೆ ವಯಸ್ಸಾಗಿದೆ. ಈಗ ಅವರು ಬೇರೆ ಕಡೆ ಸರ್ಕಾರಿ ನೌಕರಿಗೆ ಸೇರತಕ್ಕಂಥ ಪರಿಸ್ಥಿತಿಯಿಲ್ಲ. ಈಗ ಅವರನ್ನು ಸಕ್ರಮ ಮಾಡದಿದ್ದರೆ ಅವರ ಪರಿಸ್ಥಿತಿ ಏನಾಗುತ್ತದೆ. ಸರ್ಕಾರ ಇದನ್ನು ಯೋಚನೆ ಮಾಡಬೇಕೋ, ಬೇಡವೋ? ಅವರನ್ನು ಖಾಯಂ ಮಾಡಲು ಸಾಧ್ಯವಿಲ್ಲವೆಂಬ ಉಚ್ಛನ್ಯಾಯಾಲಯದ ಆದೇಶ ಇದೆ ಎನ್ನುವ ಮಾತನ್ನು ಹೇಳುತ್ತಾರೆ. ಆದ್ದರಿಂದ, ನಾನು ಇದಕ್ಕೆ ಒಂದು ಪರಿಹಾರವನ್ನು ಸೂಚಿಸಲು ಇಚ್ಛಿಪಡುತ್ತೇನೆ. ಇದೇ ಸರ್ಕಾರಿ ಗ್ರಾಮಾಂತರ ಪ್ರದೇಶದ ಎಲ್ಲ ಆಸ್ಪತ್ರೆಗಳಿಗೆ ವೈದ್ಯರುಗಳನ್ನು ನೇಮಕ ಮಾಡಿದೆ. ಮೂರು ವರ್ಷಗಳ ಕಾಲ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿದ ವೈದ್ಯರುಗಳನ್ನು, ರೋಸ್ಟರನ್ನು ಅನುಸರಿಸಿ, ಸಕ್ರಮ ಮಾಡವಂಥ ವ್ಯವಸ್ಥೆ ಈಗಾಗಲೇ ಸರ್ಕಾರದಲ್ಲಿ ಇದೆ. ಆ ಪರಿಪಾಠವನ್ನು ಇಲ್ಲಿಯೂ ಅನುಸರಿಸುವುದರ ಮೂಲಕ ಯಾರ್ಯಾರು ಸರ್ಕಾರೀ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ, ಅವರನ್ನು ಸಕ್ರಮಗೊಳಿಸಬೇಕೆಂದು ಹೇಳುತ್ತೇನೆ. ಈಗ ಅವರು ಮುಷ್ಕರ ಮಾಡುತ್ತಿದ್ದಾರೆ. ಈಗಾಗಲೇ ಸರ್ಕಾರದಲ್ಲಿ